**ಪಟ್ಟಾಭಿರಾಮನಗರ, ವಾರ್ಡ್ ಸಂಖ್ಯೆ: 168**
**ದಿನಾಂಕ: 25.09.2021 ರಂದು ವಾರ್ಡ್ ಸಂ: 168 ಪಟ್ಟಾಭಿರಾಮನಗರ ನಡೆದ ವಾರ್ಡ್ ಸಭೆ:**
**<u>ಸಮಿತಿ ಸಭೆಯ ನಡವಳಿಗಳು</u>**

ಹಾಜರಿದ್ದ ವಾರ್ಡ್ ಸಮಿತಿ ಸದಸ್ಯರು:-

| ಕ್ರಮ ಸಂಖ್ಯೆ | ಹೆಸರು | ಹುದ್ದೆ |
|---|---|---|
| 01 | ಶ್ರೀ ಜಾನರ್ಧನ್.ಪಿ | ಅಧ್ಯಕ್ಷರು |
| 02 | ಶ್ರೀ ಸಂತೋಷ್ ಕುಮಾರ್.ಬಿ | ಕಾರ್ಯದರ್ಶಿ ಮತ್ತು ಸಂಚಾಲಕರು |
| 03 | ಶ್ರೀ ಜಯಶಂಕರ್.ಬಿ.ಎಸ್ | ಸ.ಕಾ.ನಿ.ಅ, ಜಯನಗರ ಉಪವಿಭಾಗ |
| 04 | ಶ್ರೀ ಮಂಜುನಾಥ್ ರೆಡ್ಡಿ | ಕಾ.ಪ.ಅ ಜಯನಗರ ವಿಭಾಗ |
| 05 | ಶ್ರೀಮತಿ ಶಶಿಕಲಾ | ಸ.ಕಾ.ನಿ.ಅ (ಘನತ್ಯಾಜ್ಯ) ಜಯನಗರ ವಿಭಾಗ |
| 06 | ಶ್ರೀ ದೇಸಾಯಿ | ಸ.ಕಾ.ನಿ.ಅ ಬೆಂಗಳೂರು ಜಲಮಂಡಳಿ |
| 07 | ಶ್ರೀ ಉಮೇಶ್ | ಸ.ಕಾ.ನಿ.ಅ ವಿದ್ಯುತ್-ದಕ್ಷಿಣ |
| 08 | ಶ್ರೀ ಸುದರ್ಶನ್ | ಆರಕ್ಷಕ ನಿರೀಕ್ಷಕರು, ಜಯನಗರ ಪೊಲೀಸ್ ಠಾಣೆ |
| 09 | ಕು: ಕಾವ್ಯ | ಕಿರಿಯ ಆರೋಗ್ಯ ಪರೀವಿಕ್ಷಕರು |
| 10 | ಶ್ರೀ ರಾಮಚಂದ್ರ | ಹಿರಿಯ ಆರೋಗ್ಯ ಪರೀವಿಕ್ಷಕರು |
| 11 | ಶ್ರೀ ಕೇಶವ್ | ಸ್ಥಳೀಯಾ ನಿವಾಸಿ |
| 12 | ಶ್ರೀ ರಾಮಚಂದ್ರ ರಾಜು | ಸ್ಥಳೀಯಾ ನಿವಾಸಿ |
| 13 | ಶ್ರೀ ಚಂದ್ರು | ಸ್ಥಳೀಯಾ ನಿವಾಸಿ |
| 14 | ಶ್ರೀ ಅಶ್ವಥ್ | ಸ್ಥಳೀಯಾ ನಿವಾಸಿ |
| 15 | ಶ್ರೀ ಚೇತನ್ | ಸ್ಥಳೀಯಾ ನಿವಾಸಿ |

ವಾರ್ಡ್: ಸಮಿತಿ ಅಧ್ಯಕ್ಷರು ಸಭೆಗೆ ಹಾಜರಿದ್ದ ಎಲ್ಲಾ ಸದಸ್ಯರು ಮತ್ತು ಅಧಿಕಾರಿ ವರ್ಗದವರಿಗೆ ಸ್ವಾಗತವನ್ನು ಕೋರುತ್ತಾ, ಸಭೆಯನ್ನು ಪ್ರಾರಂಭಿಸಿದರು:

1) ಮಾನ್ಯ ನೋಡಲ್ ಅಧಿಕಾರಿಯವರು ಮಾತನಾಡುತ್ತಾ ಹಿಂದಿನ ಸಭೆಯಲ್ಲಿ , ಸಾರ್ವಜನಿಕರು ಮತ್ತು ನಾಗರಿಕರು ತಿಳಿಸಿದ ಸಮಸ್ಯೆಗಳ ಬಗ್ಗೆ ಮಾಹಿತಿ ಪಡೆದುಕೊಂಡರು.

2) ಘನತ್ಯಾಜ್ಯ ವಿಲೇವಾರಿ ಮಾಡುವ ವಾಹನಗಳಿಗೆ RFID ಮತ್ತು GPS ಸದಾನಗಳನ್ನು ಅಳವಾಡಿಸಲಾಗುತ್ತಿರುವ ಬಗ್ಗೆ ಶ್ರೀ ಸಾಧಿಕ್, ಕಿ.ಆ.ಪ ರವರು ಸಭೆಗೆ ಮಾಹಿತಿ ಒದಗಿಸದರು. ಹಾಗೂ ಗುತ್ತಿಗೆದಾರರು ಇಗಲೂ 2011 ಕ್ಕು ಹಿಂದೆ ಖರಿದಿಸಿರುವ ವಾಹನಗಳನ್ನು ಘವಾತ್ಯಾಜ್ಯ ವಿಲೇವಾರಿ ಕಳುಹಿಸುತ್ತಿದ್ದು ಅಂತಹ ವಾಹನಗಳಿಗೆ ಹಾಜರಾತಿ ನೀಡುತ್ತಿಲ್ಲವೆಂದು ಸಭೆಗೆ ತಿಳಿಸಿದರು.

3) ಆಗ್ಗಿಂದಾಗೆ ಬೀಳುವ ಡೇಬ್ರಿಸ್‌ಗಳನ್ನು ತೆರೆವುಗೊಳಸಲು, ಟ್ರ್ಯಾಕ್ಟರ್ ಲಭ್ಯತೆಯ ಬಗ್ಗೆ ಮಾನ್ಯ ಅಧ್ಯಕ್ಷರು ಮಾಹಿತಿ ಪಡೆದುಕೊಂಡರು.

4) ಕೋವಿಡ್-19 ವಿಚಾರವಾಗಿ ಚರ್ಚಿಸಲಾಗಿ, ಕೋವಿಡ್-19 ಪರೀಕ್ಷೆ, ಅದಕ್ಕೆ ಒದಗಿಸು ಉಚಿತ ಔಷದಿಗಳ ಬಗ್ಗೆ, ಶ್ರೀ ರಾಮಚಂದ್ರ .ಹಿ.ಆ.ಪ ರವರು ಮಾಹಿತಿಯನ್ನು ಒದಗಿಸಿದರು.

5) Black Spot ಗಳನ್ನು ಪರಿಣಾಮಕಾರಿಯಾಗಿ ನಿರ್ಮೂಲನೆ ಮಾಡಲು ಸಿಸಿಟಿವಿ ಕ್ಯಾಮರಗಳನ್ನು ಹಾಕಿಸಿಕೊಡುವಂತೆ ಶ್ರೀ ಸಾಧಿಕ್ ಕಿ.ಆ.ಪ ರವರು ಮನವಿ ಮಾಡಿದರು. ಇದಕ್ಕೆ ಉತ್ತರಿಸಿದ ವಾರ್ಡ್ ಸಹಾಯಕ ಅಭಿಯಂತರರು , ಈಗಾಗಲೇ ಇದಕ್ಕೆ 15ನೇ ಹಣಕಾಸಿನ ಆಯೋಗದ ಅನುದಾನದಲ್ಲಿ ಹಣ ಮೀಸಲಿಟ್ಟದ್ದು ಜಾಬ್ ಕೋಡ್ ಪಡೆದು , ಟಂಡರ್ ಪ್ರಕ್ರಯೆ ನಂತರ ಗುತ್ತಿಗೆದಾರರನ್ನು ನೇಮಿಸಿಕೊಂಡು ಕ್ಯಾಮರಗಳನ್ನು ಅಳವಡಿಸಲಾಗುವುದು ಎಂದು ತಿಳಿಸಿದರು.

6) 26ನೇ ಮುಖ್ಯರಸ್ತೆ ಮತ್ತು 32ನೇ "ಇ" ಅಡ್ಡರಸ್ತೆ, ಜಯನಗರ ಸಾರ್ವಜನಿಕ ಆಸ್ಪತ್ರೆ ಸುತ್ತಾಮುತ್ತಾ ಅನಧಿಕೃತವಾಗಿ ನಿಲ್ಲಿಸಲಾಗಿರುವ ವಾಹನಗಳನ್ನು ತೆರೆವುಗೋಳಿಸಿ ಕೊಡುವಂತೆ ಶ್ರೀಮತಿ ಕಾವ್ಯ ಕಿ.ಆ.ಪ ರವರು ಮನವಿ ಮಾಡಿದರು (ಕ್ರಮ : ಸಂಚಾರಿ ನಿರೀಕ್ಷಕರು, ಜಯನಗರ ಪೋಲೀಸ್ ಠಾಣೆ).

7) ವಾರ್ಡ್‌ನಲ್ಲಿ ನಿರ್ವಹಿಸಲಾಗಿತ್ತಿರು ಕಾಮಗಾರಿಗಳ ಪಟ್ಟಿ ಹಾಗೂ ಮುಂದೆ ಕೈಗೂಳ್ಳುವ ಕಾಮಗಾರಿಗಳ ಪಟ್ಟಿಯನ್ನು ಮುಂದಿನ ಸಭೆಯ ಮುನ್ನಾ ಒದಗಿಸುವಂತೆ, ಸಹಾಯಕ ಅಭಿಯಂತರರಿಗೆ ಸೂಚಿಸಿದರು.

8) ಕಂದಾಯ ವಸೂಲಾತಿ ಬಗ್ಗೆ ಮಾನ್ಯ ಅಧ್ಯಕ್ಷರು ವಿಚಾರಿಲಾಗಿ, ಕಂದಾಯ ಪರಿವೀಕ್ಷಕರಾದ ಶ್ರೀ ಪ್ರಕಾಶ್ ರವರು ಮಾತನಾಡಿ, ಈವೆರೆಗೆ ಶೇ 60 ರಷ್ಟು ಕಂದಾಯ ವಸೂಲಾಗಿದ್ದು, ಇನ್ನುಳಿದ ಶೇ 40ರಷ್ಟು ಕಂದಾಯ ವಸೂಲಾತಿಗಾಗಿ ಕಾರಣ ಕೇಳಿ ಪತ್ರವನ್ನು ಕಳುಹಿಸಲಾಗಿರುತ್ತದೆ ಎಂದು ತಿಳಿಸಿರುತ್ತಾರೆ.

**ನಿರ್ಣಯ:-** ಈ ವಿಷಯಕ್ಕೆ ಸಮಿತಿಯು ಒಪ್ಪಗೆ ತಿಳಿಸಿರುತ್ತಾರೆ. ವಾರ್ಡ್ ಸಮೀತಿಯ ಮಾರ್ಪಿಡಿತ ಮೇಲೆ ಕಾಣಿಸಿರುವ ಎಲ್ಲಾ ವಿಷಯಗಳನ್ನು ಸಮರ್ಪಕವಾಗಿ ಕೆಲಸ ನಿರ್ವಹಿಸಲು ಸೂಚಿಸಿದರು. ವಾರ್ಡ್ ಸಮಿತಿಯ ಅಧ್ಯಕರು ಸದಸ್ಯರುಗಳಿಗೆ ಹಾಗೂ ಪಾಲಿಕೆ ಅಧಿಕಾರಿಗಳಿಗೆ ವಂದಾನಾರ್ಪಣೆ ತಿಳಿಸುತ್ತಾ ದಿ: 04.10.2021ರಂದು ಬೆಳ್ಳಗೆ 11.00ಗಂಟೆಗೆ ಮತ್ತೆ ಸಭೆ ಸೇರಲು ಹಾಗೂ ಆ ಸಭೆಯಲ್ಲಿ ವಾರ್ಡ್‌ಗೆ ಸಂಬಂಧಪಟ್ಟ ಅಧಿಕಾರಿಗಳು ಸಭೆ ಹಾಜರಾಗುವಂತೆ, ಪತ್ರ ಕಳುಹಿಸುವಂತೆ ತಿಳಿಸಿದರು .

ಕಾರ್ಯದರ್ಶಿ ಮತ್ತು ಸಂಚಾಲಕರು
ಹೆಸರು: ಸಂತೋಷ್ ಕುಮಾರ್.ಬಿ
ಸಹಾಯಕ ಅಭಿಯಂತರರು